# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ : 690
2. ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 22/02/2022.
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಎಪಿಎಂಸಿ ಕಾಯ್ದೆ ತಿದ್ದುಪಡಿಯ ಪರಿಣಾಮಗಳಿಂದ ರೈತರು ಬೆಳೆದ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗದೆ ರೈತರು ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಉತ್ಪನ್ನಗಳ ಬೆಲೆ ಕಡಿಮೆಯಾಗಿದೆ; ಎಷ್ಟು ದರ ಕಡಿಮೆಯಾಗಿದೆ; ರೈತರು ಬೆಳೆದ ಉತ್ಪನ್ನಗಳಿಗೆ ಸೂಕ್ತ ಬೆಲೆ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br>ರೈತರಿಗೆ ಉತ್ತಮ ಮಾರುಕಟ್ಟೆ ಸೌಲಭ್ಯ ಒದಗಿಸಿ ಸ್ಪರ್ಧಾತ್ಮಕ ಬೆಲೆ ದೊರಕಿಸುವಂತಾಗಲು ಹಾಗೂ ರೈತ ಬೆಳೆಗಾರರಿಗೆ ಹತ್ತಿರದಲ್ಲಿಯೇ ಸೂಕ್ತ ಹಾಗೂ ಸರಳೀಕೃತ ಮಾರುಕಟ್ಟೆ ಸೌಲಭ್ಯ ಕಲ್ಪಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರವು ಅಧ್ಯಾದೇಶ ಸಂ:05/2020ರ ಮೂಲಕ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 8(2), ಕಲಂ 8(3) ಹಾಗೂ ಕಲಂ 117ಕ್ಕೆ ತಿದ್ದುಪಡಿ ಮಾಡಿ ದಿ:16/05/2020 ರಿಂದ ಜಾರಿಗೆ ಬರುವಂತೆ ಅವಕಾಶ ನೀಡಲಾಗಿದೆ.<br>ತಿದ್ದುಪಡಿ ಮೇರೆಗೆ ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಎಪಿಎಂಸಿ ಪ್ರಾಂಗಣದಲ್ಲಿಯೇ ಮಾರಾಟ ಮಾಡಬೇಕೆಂಬ ನಿರ್ಬಂಧ ತೆರವುಗೊಳಿಸಲಾಗಿದೆ ಹಾಗೂ ಮಾರುಕಟ್ಟೆ ಸಮಿತಿಗಳ ನಿಯಂತ್ರಣವನ್ನು ಪ್ರಾಂಗಣಕ್ಕೆ ಸೀಮಿತಗೊಳಿಸಿದೆ. ತದನಂತರ ಕಾಯ್ದೆ ಸಂ:59/2020ರ ಮೂಲಕ ದಿ:31/12/2020 ರಂದು ತಿದ್ದುಪಡಿ ಮಾಡಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.<br>ತಿದ್ದುಪಡಿ ಕೈಗೊಂಡ ನಂತರದಲ್ಲಿ ರಾಜ್ಯದಲ್ಲಿನ ರೈತರು ತಾವು ಬೆಳೆದ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆ ಪ್ರಾಂಗಣಗಳಲ್ಲಿ, ಕೃಷಿ ಮಾರಾಟ ನಿರ್ದೇಶಕರಿಂದ ಲೈಸೆನ್ಸ್ ಹೊಂದಿರುವ ನೇರ ಖರೀದಿ ಕೇಂದ್ರಗಳಲ್ಲಿ, ರೈತ-ಗ್ರಾಹಕ ಮಾರುಕಟ್ಟೆ ಪ್ರಾಂಗಣಗಳಲ್ಲಿ, ಖಾಸಗಿ ಮಾರುಕಟ್ಟೆ ಪ್ರಾಂಗಣಗಳಲ್ಲಿ ಮಾರಾಟ ಮಾಡುವ ಅವಕಾಶಗಳೊಂದಿಗೆ ತಮ್ಮ ಹೊಲದಲ್ಲಿಯೂ ಸಹ ತಮ್ಮ ಇಚ್ಛೆಯಂತೆ ಮಾರಾಟ ಮಾಡಲು ಹಾಗೂ ಹೆಚ್ಚಿನ ಧಾರಣೆ ಪಡೆಯಲು ಅವಕಾಶ ಲಭ್ಯವಾಗಿದೆ. |

| | | |
|---|---|---|
| | | ಪ್ರಸ್ತುತ ತಿದ್ದುಪಡಿ ನಂತರದ ಬೆಳವಣಿಗೆಯಲ್ಲಿ ಮಾರುಕಟ್ಟೆ ಪ್ರಾಂಗಣದ ಹೊರಗಿನ ವ್ಯಾಪಾರ ವಹಿವಾಟಿನಲ್ಲಿ ರೈತರು ಅನಾನುಕೂಲ/ತೊಂದರೆಗೆ ಒಳಗಾಗಿರುವ ಕುರಿತು ಸರ್ಕಾರಕ್ಕೆ ಯಾವುದೇ ಮಾಹಿತಿ ಅಥವಾ ದೂರು ಸಲ್ಲಿಕೆಯಾಗಿರುವುದಿಲ್ಲ.<br><br>ಮಾರುಕಟ್ಟೆಗಳಲ್ಲಿ ಬೇಡಿಕೆ ಮತ್ತು ಪೂರೈಕೆ ಆಧಾರದಲ್ಲಿ ಬೆಲೆಗಳು ನಿರ್ಧಾರವಾಗುತ್ತದೆ. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 76 ರಡಿ ನಿರ್ದಿಷ್ಟಪಡಿಸಿರುವಂತೆ ಅಧಿಸೂಚಿತ ಕೃಷಿ ಉತ್ಪನ್ನದ ಮಾರಾಟ ಬೆಲೆಯನ್ನು ಟೆಂಡರ್ ಪದ್ಧತಿ ಅಥವಾ ಸಾರ್ವಜನಿಕ ಹರಾಜು ಅಥವಾ ಬಹಿರಂಗ ಒಪ್ಪಂದ ಅಥವಾ ಮಾದರಿ ಗುಣಮಟ್ಟದ ಆಧಾರದ ಮೂಲಕ ನಿರ್ಧರಿಸಲಾಗುತ್ತದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಬೆಲೆ ನಿರ್ಧರಣೆ ಮಾಡುವ ಅಧಿಕಾರ ಹೊಂದಿರುವುದಿಲ್ಲ.<br><br>ಮಾರುಕಟ್ಟೆಗಳಲ್ಲಿ ಧಾರಣೆ ಕುಸಿತ ಕಂಡ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಬೆಂಬಲ ಬೆಲೆಯನ್ನು ಘೋಷಿಸಿ ಗೊತ್ತುಪಡಿಸಿದ ಏಜೆನ್ಸಿಗಳ ಮೂಲಕ ರೈತರಿಂದ ಉತ್ಪನ್ನಗಳನ್ನು ಖರೀದಿಸಲು ಕ್ರಮ ವಹಿಸುತ್ತದೆ. ಸರ್ಕಾರವು ಧಾರಣೆ ಕುಸಿತ ಸಂದರ್ಭದಲ್ಲಿ ಮಧ್ಯ ಪ್ರವೇಶಿಸುವುದರಿಂದ ರೈತರಿಗೆ ನೆರವಾಗುವುದಲ್ಲದೆ ಮಾರುಕಟ್ಟೆಯಲ್ಲಿ ಧಾರಣೆ ಸ್ಥಿರಗೊಳ್ಳಲು ಸಾಧ್ಯವಾಗುತ್ತದೆ.<br><br>ರಾಜ್ಯ ಸರ್ಕಾರವು ರಾಜ್ಯದಲ್ಲಿ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆಗಾಗಿ ರಾಷ್ಟ್ರೀಯ ಇ-ಮಾರ್ಕೆಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (ರೆಮ್ಸ್) ಸಂಸ್ಥೆಯನ್ನು ಸ್ಥಾಪನೆ ಮಾಡಿರುತ್ತದೆ. ಸದರಿ ಸಂಸ್ಥೆಯ ಮೂಲಕ ಜಾರಿಯಾಗುತ್ತಿರುವ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆಯಲ್ಲಿ ಇ-ಟೆಂಡರ್ ಪದ್ಧತಿಯ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಖರೀದಿದಾರರು ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವುದರಿಂದ ಉತ್ಪನ್ನದ ನೈಜ ಬೆಲೆ ನಿರ್ಧರಣೆಗೆ ಅವಕಾಶವಾಗುತ್ತಿದೆ. |

| | | |
|---|---|---|
| ಆ) | ಎಪಿಎಂಸಿ ಕಾಯ್ದೆ ತಿದ್ದುಪಡಿಯ ಪೂರ್ವದಲ್ಲಿ ರಾಜ್ಯದಲ್ಲಿರುವ ಎಪಿಎಂಸಿ ಗಳಿಗೆ ಬರುತ್ತಿದ್ದ ವಾರ್ಷಿಕ ಆದಾಯವೆಷ್ಟು; ಕಾಯ್ದೆ ತಿದ್ದುಪಡಿಯ ನಂತರ ಎಪಿಎಂಸಿ ಗಳಿಗೆ ಬರುತ್ತಿರುವ ವಾರ್ಷಿಕ ಆದಾಯವೆಷ್ಟು; (ಎಪಿಎಂಸಿ ವಾರು ಮಾಹಿತಿ ನೀಡುವುದು) | 2019-20 ರಿಂದ 2021-22 (ಜನವರಿ-2022ರ ಅಂತ್ಯದವರೆಗೆ) ಮಾರುಕಟ್ಟೆ ಸಮಿತಿಗಳ ಆದಾಯದ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಇ) | ಎಪಿಎಂಸಿ ಕಾಯ್ದೆ ತಿದ್ದುಪಡಿಯ ಪರಿಣಾಮಗಳಿಂದ ರೈತರು ಬೆಳೆದ ಉತ್ಪನ್ನಗಳು ಎಪಿಎಂಸಿ ಮೂಲಕ ಮಾರಾಟವಾಗದೇ ನೇರವಾಗಿ ಖಾಸಗಿ ವ್ಯಾಪಾರಸ್ಥರ ಕೈಸೇರುತ್ತಿರುವುದರಿಂದ ಬೆಲೆಗಳು ಗಗನಕ್ಕೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಬೆಲೆಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಎಪಿಎಂಸಿ ಕಾಯ್ದೆ ತಿದ್ದುಪಡಿಯ ಪರಿಣಾಮಗಳಿಂದ ರೈತ-ಬೆಳೆಗಾರರ ಕೃಷಿ ಉತ್ಪನ್ನಗಳು ಈ ಹಿಂದಿನಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮಾರುಕಟ್ಟೆ ಪ್ರಾಂಗಣಗಳಲ್ಲಿ, ಕೃಷಿ ಮಾರಾಟ ನಿರ್ದೇಶಕರಿಂದ ಲೈಸೆನ್ಸ್ ಹೊಂದಿದ ನೇರ ಖರೀದಿ ಕೇಂದ್ರಗಳಲ್ಲಿ, ಖಾಸಗಿ ಮಾರುಕಟ್ಟೆ ಪ್ರಾಂಗಣಗಳಲ್ಲಿ, ರೈತ-ಗ್ರಾಹಕ ಮಾರುಕಟ್ಟೆ ಪ್ರಾಂಗಣಗಳಲ್ಲಿ ಮಾರಾಟವಾಗುತ್ತಿದೆ. ಅಲ್ಲದೇ, ಮಾರುಕಟ್ಟೆ ಕಾಯ್ದೆ ತಿದ್ದುಪಡಿ ನಂತರದಲ್ಲಿನ ಅವಕಾಶಗಳನ್ನು ಬಳಸಿಕೊಂಡು ಈ ಮೇಲೆ ತಿಳಿಸಿದ ಅಧಿಸೂಚಿತ ಪ್ರದೇಶಗಳಲ್ಲದ ಹೊರಗಿನ ಸ್ಥಳಗಳಲ್ಲೂ ಖಾಸಗಿ ವ್ಯಕ್ತಿಗಳು ವ್ಯಾಪಾರ ವಹಿವಾಟು ನಡೆಸಲು ಅವಕಾಶವಾಗಿರುತ್ತದೆ.<br><br>ಖಾಸಗಿ ವ್ಯಾಪಾರಸ್ಥರ ಕೈ ಸೇರುತ್ತಿರುವುದರಿಂದ ಬೆಲೆಗಳು ಗಗನಕ್ಕೇರಿರುವುದು ಗಮನಕ್ಕೆ ಬಂದಿಲ್ಲ. |

ಸಂಖ್ಯೆ: ಸಿಒ 39 ಎಂಆರ್‌ಇ 2022

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

LCQ No. 690

# ಅನುಬಂಧ

**2019-20 ರಿಂದ 2021-22ನೇ ಸಾಲಿನ (ಜನವರಿ-2022ರವರೆಗೆ) ಮಾರುಕಟ್ಟೆ ಶುಲ್ಕ ಹಾಗೂ ಬಳಕೆದಾರರ ಶುಲ್ಕದ ವಿವರ( ರೂ.ಲಕ್ಷಗಳಲ್ಲಿ)**

| ಕ್ರ.ಸಂ | ಸಮಿತಿಗಳ ಹೆಸರು | 2019-20 | | 2020-21 | | 2021-22 (ಜನವರಿ-2022ರ ಅಂತ್ಯಕ್ಕೆ) | |
|---|---|---|---|---|---|---|---|
| | | ಮಾ.ಶು. | ಬ.ಶು | ಮಾ.ಶು. | ಬ.ಶು | ಮಾ.ಶು. | ಬ.ಶು |
| 1 | ಬೆಂಗಳೂರು | 3981.03 | 2070.92 | 1775.38 | 851.66 | 830.09 | 745.02 |
| 2 | ಬೆಂಗಳೂರು (ಹಮತ) | 11.88 | 876.69 | 3.13 | 507.73 | 3.17 | 747.17 |
| 3 | ದೊಡ್ಡಬಳ್ಳಾಪುರ | 174.59 | 20.30 | 97.49 | 15.83 | 5.85 | 10.24 |
| 4 | ಹೊಸಕೋಟೆ | 23.71 | 144.00 | 7.15 | 9.42 | 0.24 | 0.33 |
| 5 | ಚನ್ನಪಟ್ಟಣ | 45.34 | 53.27 | 22.14 | 35.88 | 9.23 | 37.52 |
| 6 | ಕನಕಪುರ | 32.18 | 4.66 | 24.51 | 2.69 | 1.46 | 3.37 |
| 7 | ರಾಮನಗರ | 57.49 | 36.08 | 16.78 | 24.55 | 8.28 | 24.09 |
| 8 | ಚಿತ್ರದುರ್ಗ | 941.33 | 0.00 | 379.12 | 0.00 | 291.20 | 3.06 |
| 9 | ಚಳ್ಳಕೆರೆ | 202.09 | 0.00 | 124.71 | 0.00 | 93.89 | 0.07 |
| 10 | ಹೊಸದುರ್ಗ | 107.74 | 0.00 | 80.72 | 0.00 | 16.07 | 0.00 |
| 11 | ಹೊಳಲ್ಕೆರೆ | 195.55 | 0.36 | 74.81 | 0.00 | 17.39 | 0.00 |
| 12 | ಹಿರಿಯೂರು | 132.83 | 0.00 | 27.75 | 0.00 | 10.08 | 0.42 |
| 13 | ರಾಂಪುರ | 9.24 | 0.00 | 4.25 | 0.00 | 0.87 | 0.00 |
| 14 | ದಾವಣಗೆರೆ | 1292.00 | 78.96 | 573.32 | 61.85 | 199.43 | 51.60 |
| 15 | ಹರಿಹರ | 316.00 | 0.00 | 148.02 | 0.00 | 17.20 | 0.00 |
| 16 | ಚನ್ನಗಿರಿ | 1141.00 | 0.00 | 480.24 | 0.00 | 426.25 | 0.00 |
| 17 | ಹೊನ್ನಾಳಿ | 363.03 | 6.36 | 126.30 | 5.30 | 7.82 | 2.96 |
| 18 | ಜಗಳೂರು | 32.34 | 1.35 | 18.82 | 0.00 | 2.13 | 0.00 |
| 19 | ಕೋಲಾರ | 53.28 | 421.00 | 27.28 | 306.83 | 13.96 | 316.23 |
| 20 | ಬಂಗಾರಪೇಟೆ | 180.18 | 5.99 | 98.24 | 9.10 | 51.27 | 6.62 |
| 21 | ಮಾಲೂರು | 23.97 | 55.42 | 12.84 | 18.12 | 4.30 | 22.18 |
| 22 | ಮುಳಬಾಗಿಲು | 26.18 | 28.74 | 6.23 | 38.06 | 1.39 | 33.01 |
| 23 | ಶ್ರೀನಿವಾಸಪುರ | 1.28 | 81.15 | 0.00 | 30.18 | 1.08 | 54.94 |
| 24 | ಚಿಂತಾಮಣಿ | 109.54 | 83.38 | 44.86 | 62.60 | 24.37 | 77.84 |
| 25 | ಗೌರಿಬಿದನೂರು | 51.92 | 2.97 | 9.80 | 2.10 | 5.16 | 1.75 |
| 26 | ಚಿಕ್ಕಬಳ್ಳಾಪುರ | 18.53 | 151.31 | 3.21 | 57.84 | 33.54 | 52.96 |
| 27 | ಬಾಗೇಪಲ್ಲಿ | 27.27 | 18.33 | 7.43 | 27.32 | 2.72 | 27.12 |
| 28 | ತುಮಕೂರು | 997.00 | 40.96 | 418.45 | 34.82 | 124.07 | 16.22 |
| 29 | ತುರುವೇಕೆರೆ | 252.32 | 0.00 | 98.00 | 0.00 | 73.20 | 0.00 |
| 30 | ಪಾವಗಡ | 26.79 | 0.00 | 9.21 | 0.00 | 1.35 | 0.00 |
| 31 | ಗುಬ್ಬಿ | 400.08 | 0.79 | 114.38 | 0.10 | 31.68 | 1.04 |
| 32 | ಹುಳಿಯಾರು | 177.00 | 0.00 | 47.05 | 0.00 | 10.67 | 0.00 |

| | | | | | | | |
|---|---|---|---|---|---|---|---|
| 33 | ಮಧುಗಿರಿ | 19.18 | 0.00 | 6.39 | 0.00 | 2.97 | 0.00 |
| 34 | ತಿಪಟೂರು | 1167.62 | 0.00 | 619.96 | 0.00 | 384.51 | 5.92 |
| 35 | ಶಿರಾ | 80.38 | 0.00 | 52.18 | 0.00 | 35.91 | 0.00 |
| 36 | ಕುಣಿಗಲ್ | 111.28 | 0.00 | 36.33 | 0.00 | 29.92 | 0.51 |
| 37 | ಕೊರಟಗೆರೆ | 6.11 | 0.00 | 0.96 | 0.00 | 0.00 | 0.00 |
| 38 | ಶಿವಮೊಗ್ಗ | 3365.75 | 13.79 | 1196.50 | 8.16 | 783.41 | 7.28 |
| 39 | ಸಾಗರ | 813.00 | 0.00 | 339.90 | 0.00 | 187.83 | 0.00 |
| 40 | ಶಿಕಾರಿಪುರ | 585.78 | 0.00 | 250.70 | 0.00 | 43.10 | 0.00 |
| 41 | ಭದ್ರಾವತಿ | 489.21 | 0.00 | 152.68 | 0.00 | 67.56 | 0.12 |
| 42 | ತೀರ್ಥಹಳ್ಳಿ | 495.34 | 0.00 | 152.28 | 0.00 | 123.88 | 0.00 |
| 43 | ಹೊಸನಗರ | 242.31 | 0.00 | 123.48 | 0.00 | 96.10 | 0.00 |
| 44 | ಸೊರಬ | 176.42 | 0.00 | 76.09 | 0.00 | 0.48 | 0.00 |
| 45 | ಮೈಸೂರು | 816.22 | 253.59 | 618.83 | 306.13 | 166.91 | 96.66 |
| 46 | ಹುಣಸೂರು | 131.92 | 0.00 | 25.28 | 0.00 | 18.22 | 2.60 |
| 47 | ಕೆ.ಆರ್.ನಗರ | 198.43 | 0.00 | 31.69 | 0.83 | 23.95 | 2.13 |
| 48 | ಸಂತೆಸರಗೂರು | 329.39 | 0.00 | 130.33 | 0.00 | 2.03 | 0.62 |
| 49 | ನಂಜನಗೂಡು | 245.17 | 26.05 | 36.16 | 13.75 | 9.32 | 13.83 |
| 50 | ಟಿ.ನರಸೀಪುರ | 193.00 | 0.00 | 45.29 | 0.65 | 30.78 | 2.79 |
| 51 | ಪಿರಿಯಾಪಟ್ಟಣ | 231.96 | 0.00 | 18.08 | 0.00 | 21.33 | 0.03 |
| 52 | ಚಾಮರಾಜನಗರ | 148.00 | 1.59 | 60.29 | 1.70 | 17.51 | 1.93 |
| 53 | ಕೊಳ್ಳೇಗಾಲ | 113.90 | 0.00 | 44.05 | 0.50 | 1.87 | 0.01 |
| 54 | ಗುಂಡ್ಲುಪೇಟೆ | 245.11 | 46.38 | 68.10 | 24.87 | 2.66 | 17.79 |
| 55 | ಮಂಡ್ಯ | 423.43 | 0.00 | 208.22 | 0.00 | 156.14 | 4.14 |
| 56 | ಕೆ.ಆರ್.ಪೇಟೆ | 159.66 | 3.96 | 57.80 | 1.54 | 42.94 | 1.16 |
| 57 | ಮದ್ದೂರು | 276.68 | 0.00 | 127.12 | 0.00 | 92.68 | 0.09 |
| 58 | ನಾಗಮಂಗಲ | 233.68 | 0.49 | 80.94 | 0.45 | 25.08 | 0.28 |
| 59 | ಪಾಂಡವಪುರ | 54.20 | 0.00 | 25.35 | 0.00 | 24.81 | 0.00 |
| 60 | ಶ್ರೀರಂಗಪಟ್ಟಣ | 82.36 | 0.00 | 23.50 | 0.00 | 35.83 | 0.00 |
| 61 | ಮಳವಳ್ಳಿ | 50.22 | 0.00 | 26.84 | 0.00 | 9.60 | 0.28 |
| 62 | ಹಾಸನ | 818.95 | 151.25 | 212.67 | 76.85 | 25.49 | 61.81 |
| 63 | ಬೇಲೂರು | 233.00 | 7.67 | 48.06 | 1.55 | 0.67 | 2.62 |
| 64 | ಅರಸೀಕೆರೆ | 472.80 | 0.62 | 308.51 | 0.20 | 133.77 | 0.13 |
| 65 | ಚನ್ನರಾಯಪಟ್ಟಣ | 320.29 | 0.00 | 128.71 | 1.26 | 12.15 | 1.61 |
| 66 | ಹೊಳೆನರಸೀಪುರ | 129.00 | 0.00 | 53.98 | 0.00 | 4.10 | 0.02 |
| 67 | ಸಕಲೇಶಪುರ | 100.60 | 0.00 | 20.61 | 0.00 | 0.00 | 0.00 |
| 68 | ಅರಕಲಗೂಡು | 206.37 | 0.00 | 58.65 | 0.21 | 7.44 | 1.19 |
| 69 | ಚಿಕ್ಕಮಗಳೂರು | 285.32 | 33.65 | 75.24 | 28.87 | 4.44 | 17.76 |
| 70 | ಕಡೂರು | 485.00 | 9.26 | 94.42 | 6.01 | 118.77 | 6.84 |
| 71 | ತರೀಕೆರೆ | 376.38 | 0.99 | 118.80 | 0..12 | 52.52 | 0.00 |
| 72 | ಶೃಂಗೇರಿ | 69.43 | 0.02 | 23.80 | 0.00 | 0.00 | 0.00 |

| | | | | | | | |
|---|---|---|---|---|---|---|---|
| 73 | ಮೂಡಿಗೆರೆ | 186.66 | 0.00 | 49.04 | 0.00 | 15.60 | 0.00 |
| 74 | ಕೊಪ್ಪ | 196.92 | 0.00 | 64.09 | 0.00 | 40.56 | 0.00 |
| 75 | ಗೋಣಿಕೊಪ್ಪಲ್ | 62.72 | 0.00 | 75.12 | 0.00 | 0.12 | 0.00 |
| 76 | ಮಡಿಕೇರಿ | 194.14 | 0.00 | 30.37 | 0.00 | 6.25 | 0.00 |
| 77 | ಕುಶಾಲನಗರ | 215.00 | 3.34 | 43.84 | 0.00 | 0.08 | 0.00 |
| 78 | ಮಂಗಳೂರು | 1211.32 | 0.00 | 538.69 | 0.00 | 332.90 | 27.73 |
| 79 | ಸುಳ್ಯ | 296.15 | 0.00 | 264.47 | 0.00 | 49.28 | 0.00 |
| 80 | ಪುತ್ತೂರು | 490.69 | 0.00 | 458.78 | 0.00 | 155.81 | 0.43 |
| 81 | ಬಂಟ್ವಾಳ | 422.89 | 0.00 | 352.17 | 0.00 | 194.05 | 0.00 |
| 82 | ಬೆಳ್ತಂಗಡಿ | 284.36 | 0.00 | 219.65 | 0.00 | 72.02 | 0.00 |
| 83 | ಉಡುಪಿ | 216.45 | 16.95 | 41.92 | 26.99 | 1.08 | 36.52 |
| 84 | ಕಾರ್ಕಳ | 483.16 | 0.00 | 120.20 | 0.00 | 29.34 | 0.00 |
| 85 | ಕುಂದಾಪುರ | 270.65 | 10.93 | 80.48 | 4.62 | 40.06 | 3.58 |
| 86 | ಬೆಳಗಾಂ | 383.94 | 347.73 | 133.05 | 163.48 | 110.16 | 246.68 |
| 87 | ಅಥಣಿ | 49.30 | 0.00 | 15.58 | 0.00 | 1.13 | 0.00 |
| 88 | ಬೈಲಹೊಂಗಲ | 249.03 | 0.00 | 125.44 | 1.70 | 54.48 | 1.43 |
| 89 | ಗೋಕಾಕ್ | 188.98 | 0.00 | 83.10 | 0.00 | 12.89 | 0.00 |
| 90 | ಕುಡಚಿ | 32.75 | 0.00 | 5.36 | 0.00 | 1.47 | 0.00 |
| 91 | ನಂದಗಡ | 43.60 | 0.00 | 17.54 | 0.00 | 0.48 | 0.00 |
| 92 | ನಿಪ್ಪಾಣಿ | 15.19 | 0.00 | 1.70 | 0.00 | 0.12 | 0.00 |
| 93 | ಸಂಕೇಶ್ವರ | 82.26 | 0.00 | 15.12 | 0.00 | 2.35 | 0.00 |
| 94 | ರಾಮದುರ್ಗ | 55.93 | 0.00 | 24.38 | 0.00 | 19.34 | 0.00 |
| 95 | ಸವದತ್ತಿ | 248.77 | 0.00 | 103.05 | 0.00 | 38.04 | 0.00 |
| 96 | ಧಾರವಾಡ | 338.04 | 0.00 | 222.20 | 3.78 | 56.40 | 3.03 |
| 97 | ಅಣ್ಣಿಗೇರಿ | 180.51 | 0.00 | 82.66 | 0.00 | 10.07 | 0.00 |
| 98 | ಹುಬ್ಬಳ್ಳಿ | 912.70 | 405.06 | 474.11 | 148.64 | 319.50 | 167.80 |
| 99 | ಕಲಘಟಗಿ | 185.57 | 0.00 | 71.70 | 0.00 | 8.10 | 0.00 |
| 100 | ಕುಂದಗೋಳ | 71.90 | 0.00 | 14.86 | 0.00 | 1.02 | 0.00 |
| 101 | ಗದಗ | 656.80 | 47.83 | 360.17 | 7.14 | 182.80 | 1.64 |
| 102 | ಮುಂಡರಗಿ | 124.00 | 0.00 | 69.08 | 0.00 | 62.13 | 0.13 |
| 103 | ನರಗುಂದ | 282.58 | 0.00 | 143.81 | 0.00 | 40.65 | 0.00 |
| 104 | ರೋಣ | 118.88 | 0.00 | 39.88 | 0.00 | 47.93 | 0.02 |
| 105 | ಲಕ್ಷ್ಮೇಶ್ವರ | 135.45 | 0.00 | 219.04 | 0.00 | 63.01 | 0.41 |
| 106 | ಹಾವೇರಿ | 309.97 | 0.00 | 177.78 | 7.10 | 24.08 | 4.48 |
| 107 | ಹಿರೇಕೆರೂರು | 293.66 | 0.00 | 133.17 | 0.00 | 6.80 | 0.00 |
| 108 | ರಾಣೆಬೆನ್ನೂರು | 898.75 | 12.35 | 381.74 | 9.78 | 129.20 | 4.91 |
| 109 | ಬ್ಯಾಡಗಿ | 1890.00 | 0.00 | 1203.26 | 0.00 | 599.83 | 0.00 |
| 110 | ಸವಣೂರು | 120.00 | 0.00 | 48.51 | 0.00 | 18.37 | 0.00 |
| 111 | ಹಾನಗಲ್ | 282.00 | 0.00 | 123.21 | 0.00 | 0.53 | 0.02 |
| 112 | ಶಿಗ್ಗಾಂವ್ | 121.34 | 0.00 | 52.67 | 0.00 | 4.64 | 0.00 |

| | | | | | | | |
|---|---|---|---|---|---|---|---|
| 113 | ಕಾರವಾರ | 72.67 | 0.00 | 31.65 | 0.00 | 0.25 | 0.00 |
| 114 | ಹಳಿಯಾಳ | 112.44 | 0.00 | 33.52 | 0.00 | 4.32 | 1.04 |
| 115 | ಕುಮಟಾ | 235.17 | 0.00 | 154.78 | 0.00 | 108.47 | 0.00 |
| 116 | ಸಿರಸಿ | 860.40 | 0.00 | 520.14 | 0.00 | 394.93 | 0.03 |
| 117 | ಸಿದ್ದಾಪುರ | 259.00 | 0.00 | 222.31 | 0.00 | 141.86 | 0.00 |
| 118 | ಹೊನ್ನಾವರ | 73.20 | 0.00 | 41.15 | 0.00 | 22.20 | 0.07 |
| 119 | ಯಲ್ಲಾಪುರ | 414.36 | 0.00 | 272.92 | 0.00 | 184.22 | 0.00 |
| 120 | ಮುಂಡಗೋಡ | 101.40 | 0.00 | 42.61 | 0.00 | 3.41 | 0.00 |
| 121 | ವಿಜಯಪುರ | 701.30 | 4.88 | 343.29 | 23.67 | 267.05 | 27.97 |
| 122 | ಸಿಂಧಗಿ | 54.47 | 0.00 | 55.44 | 0.00 | 18.85 | 0.00 |
| 123 | ಇಂಡಿ | 63.34 | 0.00 | 85.89 | 0.00 | 37.18 | 0.00 |
| 124 | ತಾಳಿಕೋಟೆ | 243.94 | 0.00 | 138.88 | 0.00 | 61.05 | 0.00 |
| 125 | ಬಾಗಲಕೋಟೆ | 279.05 | 40.62 | 121.62 | 12.79 | 114.51 | 16.64 |
| 126 | ಬೀಳಗಿ | 18.90 | 0.00 | 6.20 | 0.00 | 2.14 | 0.00 |
| 127 | ಬಾದಾಮಿ | 61.84 | 0.00 | 27.36 | 0.00 | 11.87 | 0.00 |
| 128 | ಜಮಖಂಡಿ | 24.81 | 5.89 | 13.94 | 1.84 | 7.53 | 1.75 |
| 129 | ಹುನಗುಂದ | 122.08 | 0.00 | 51.00 | 0.00 | 15.82 | 0.00 |
| 130 | ಮಹಾಲಿಂಗಪುರ | 154.83 | 0.00 | 94.40 | 0.00 | 55.58 | 0.12 |
| 131 | ಕಲಬುರಗಿ | 857.00 | 0.00 | 594.67 | 10.86 | 310.60 | 15.47 |
| 132 | ಜೇವರ್ಗಿ | 121.58 | 0.00 | 121.63 | 0.00 | 77.62 | 0.00 |
| 133 | ಚಿತ್ತಾಪುರ | 155.93 | 0.00 | 81.39 | 0.00 | 45.18 | 0.00 |
| 134 | ಚಿಂಚೋಳಿ | 48.36 | 0.00 | 30.39 | 0.00 | 13.32 | 0.00 |
| 135 | ಸೇಡಂ | 314.70 | 0.00 | 162.56 | 0.00 | 149.54 | 0.00 |
| 136 | ಆಳಂದ | 7.38 | 0.00 | 9.58 | 0.00 | 3.32 | 0.00 |
| 137 | ಅಫಜಲಪುರ | 34.80 | 0.00 | 24.17 | 0.00 | 24.90 | 0.00 |
| 138 | ಸುರಪುರ | 486.31 | 0.00 | 408.61 | 0.00 | 70.41 | 0.00 |
| 139 | ಯಾದಗಿರಿ | 479.26 | 0.00 | 283.18 | 0.00 | 145.32 | 0.00 |
| 140 | ಶಹಾಪುರ | 107.81 | 0.00 | 159.67 | 0.00 | 5.48 | 0.00 |
| 141 | ಬೀದರ್ | 707.62 | 0.00 | 419.16 | 2.23 | 274.96 | 4.32 |
| 142 | ಭಾಲ್ಕಿ | 168.15 | 0.00 | 119.25 | 0.00 | 75.59 | 0.00 |
| 143 | ಹುಮನಾಬಾದ್ | 43.97 | 0.00 | 23.55 | 1.95 | 10.84 | 0.99 |
| 144 | ಬಸವಕಲ್ಯಾಣ | 54.32 | 0.00 | 46.56 | 0.00 | 12.71 | 0.00 |
| 145 | ಔರಾದ್ | 10.97 | 0.00 | 10.40 | 0.00 | 4.77 | 0.09 |
| 146 | ಬಳ್ಳಾರಿ | 1201.84 | 11.91 | 525.40 | 7.75 | 166.37 | 11.27 |
| 147 | ಹೊಸಪೇಟೆ | 120.73 | 7.70 | 75.60 | 5.40 | 21.50 | 4.69 |
| 148 | ಕೊಟ್ಟೂರು | 204.90 | 0.00 | 104.32 | 0.00 | 91.52 | 0.00 |
| 149 | ಸಿರಗುಪ್ಪ | 900.00 | 0.00 | 285.48 | 0.00 | 15.94 | 0.00 |
| 150 | ಹೆಚ್.ಬಿ.ಹಳ್ಳಿ | 195.05 | 0.00 | 79.06 | 0.00 | 8.41 | 0.00 |
| 151 | ಹಡಗಲಿ | 141.34 | 0.00 | 58.52 | 0.00 | 2.48 | 0.00 |
| 152 | ಹರಪನಹಳ್ಳಿ | 185.80 | 2.83 | 87.67 | 1.23 | 13.00 | 0.00 |

| | | | | | | | |
|---|---|---|---|---|---|---|---|
| 153 | ಸಂಡೂರು | 10.83 | 0.00 | 1.89 | 0.00 | 0.00 | 0.00 |
| 154 | ರಾಯಚೂರು | 1819.96 | 0.00 | 650.64 | 7.88 | 266.70 | 6.47 |
| 155 | ಲಿಂಗಸುಗೂರು | 280.37 | 0.00 | 167.03 | 0.00 | 77.34 | 0.00 |
| 156 | ಮಾನ್ವಿ | 165.69 | 0.00 | 113.79 | 0.00 | 34.64 | 0.00 |
| 157 | ಸಿಂಧನೂರು | 1381.00 | 0.00 | 707.79 | 0.00 | 205.27 | 0.00 |
| 158 | ಗಂಗಾವತಿ | 1108.28 | 0.00 | 607.01 | 0.00 | 305.00 | 0.00 |
| 159 | ಕಾರಟಗಿ | 1140.09 | 0.00 | 572.96 | 0.00 | 237.03 | 0.00 |
| 160 | ಯಲ್ಬುರ್ಗಾ | 60.97 | 0.00 | 22.97 | 0.00 | 4.27 | 0.00 |
| 161 | ಕೊಪ್ಪಳ | 373.65 | 0.00 | 148.58 | 0.00 | 50.89 | 2.22 |
| 162 | ಕುಷ್ಟಗಿ | 238.82 | 0.00 | 124.98 | 0.00 | 92.60 | 0.00 |
| | ಒಟ್ಟು | **56170.75** | **5650.32** | **26460.89** | **3024.34** | **12137.52** | **3077.86** |
| | | ***61821.07*** | | ***29485.23*** | | ***15215.38*** | |

ನಿರ್ದೇಶಕರ ಪರವಾಗಿ